ವಿಶೇಷ ವರ್ಗದ ಫಲಾನುಭವಿಗಳಿಗೆ ಮನೆ ಮಂಜೂರಾತಿ

185(611); ಶ್ರೀ ಬಣಕಾರ್ ಯು.ಬಿ. (ಹಿರೇಕೇರೂರು)

ಅ) ವಿಶೇಷ ವರ್ಗದ ಜನರಿಗೆ ಮನೆ ಮಂಜೂರು ಮಾಡಲು ಸರ್ಕಾರ ಕಾರ್ಯಕ್ರಮ ರೂಪಿಸಿದೆಯೇ;

ಆ) ಹಾಗಿದ್ದಲ್ಲಿ, ದಿನಾಂಕ 31.12.2014ರೊಳಗಾಗಿ ಯಾವ ಯಾವ ಜಿಲ್ಲೆಗಳಿಂದ ಯಾವ ಯಾವ ವರ್ಗದವರಿಗೆ ಮನೆ ನೀಡಲು ಪ್ರಸ್ತಾವನೆ ಬಂದಿವೆ (ವಿವರ ನೀಡುವುದು);

ಇ) ಈ ಪೈಕಿ ಹಾವೇರಿ ಜಿಲ್ಲೆಯ ತಾಲ್ಲೂಕುವಾರು ವಿವರ ಒದಗಿಸುವುದು;

ಈ) ಪ್ರಸ್ತಾವನೆ ಬಂದ ಜಿಲ್ಲೆಗಳಿಗೆ ಗುರಿ ನಿಗಧಿ ಮಾಡಲಾಗಿದೆಯೇ;

ಉ) ಇಲ್ಲವಾದರೆ, ಯಾವಾಗ ಗುರಿ ನಿಗಧಿ ಮಾಡಲಾಗುವುದು?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಹೌದು.

ಆ) 2014–15ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ವರ್ಗದವರಿಗಾಗಿ 10,000 ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಈ ಗುರಿಯಲ್ಲಿ 1,000 ಮನೆಗಳ ಗುರಿಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಯೋಗದೊಂದಿಗೆ ವಿಶೇಷ ಗೃಹ ನಿರ್ಮಾಣ ಯೋಜನೆಯಡಿ ಕುಶಲಕರ್ಮಿಗಳಿಗೆ ಮೀಸಲಿರಿಸಿದೆ. ಬಾಕಿ 9,000 ಮನೆಗಳ ಗುರಿಯನ್ನು ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ 14 ವಿಶೇಷ ವರ್ಗಗಳಿಗೆ ಆದ್ಯತೆಯನ್ನು ನೀಡಿ ಗುರಿ ನಿಗದಿಪಡಿಸಲಾಗಿದೆ.

ಜಿಲ್ಲಾ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡಿ ನಿಗಮಕ್ಕೆ ಸಲ್ಲಿಕೆಯಾದ ವರ್ಗವಾರು ಮಾಹಿತಿಯನ್ನು ಕ್ರೂಡೀಕರಿಸಲಾಗುತ್ತಿದ್ದು, ಒಟ್ಟಾರೆ ಇಲ್ಲಿಯವರೆಗೆ ಸಲ್ಲಿಕೆಯಾದ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕುಶಲಕರ್ಮಿಗಳಿಗಾಗಿ ಹಾವೇರಿ ಜಿಲ್ಲೆಗೆ 20 ಮನೆಗಳ ಗುರಿಯನ್ನು ನೀಡಿದ್ದು, ಈ ಗುರಿಗೆ 20 ಕುಶಲಕರ್ಮಿಗಳನ್ನು ಆಯ್ಕೆ ಮಾಡಲಾಗಿದೆ. ತಾಲ್ಲೂಕುವಾರು ವಿವರ ಇಂತಿದೆ:

ತಾಲ್ಲೂಕು	ಆಯ್ಕೆಯಾದ ಫಲಾನುಭವಿಗಳು
ಬ್ಯಾಡಗಿ	3
ಹಾನಗಲ್	4
ಹಾವೇರಿ	3
ಹಿರೇಕೆರೂರು	3
ರಾಣೆಬೆನ್ನೂರು	1
ಸವಣೂರು	3
ಶಿಗ್ಗಾಂವಿ	3
ಒಟ್ಟು	**20**

ಈ) **ಮತ್ತು** ಉ) ವಿಶೇಷ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಲು ಅವಧಿಯನ್ನು ದಿನಾಂಕ:31.01.2015ರ ವರೆಗೆ ವಿಸ್ತರಿಸಿದ್ದು, ಫೆಬ್ರವರಿ ತಿಂಗಳ ಮೊದಲ ವಾರದಲ್ಲಿ ಸ್ಥಳೀಯ ಸಂಸ್ಥೆವಾರು ಗುರಿನಿಗದಿಪಡಿಸಿ ಆಯ್ಕೆಯಾದ ಫಲಾನುಭವಿಗಳಿಗೆ ಅನುಮೋದನೆ ನೀಡಲಾಗುವುದು.

LA-611 | ಅನುಬಂಧ

ವಿಶೇಷ ವರ್ಗದಡಿ ನಿಗದಿಪಡಿಸಿದ 10,000 ಮನೆಗಳ ಗುರಿಗೆ ಎದುರಾಗಿ ಆಯ್ಕೆ ಮಾಡಲಾದ ಗುರಿಯ ವಿವರ

ಜಿಲ್ಲೆ	1000 ಗುರಿಗೆ ಎದುರಾಗಿ ಆಯ್ಕೆಯಾದ ಫಲಾನುಭವಿಗಳು (ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ)	9,000 ಗುರಿಗೆ ಎದುರಾಗಿ ಆಯ್ಕೆ ಮಾಡಲಾದ ಫಲಾನುಭವಿಗಳ ಸಂಖ್ಯೆ
ಬಾಗಲಕೋಟೆ	20	815
ಬೆಂಗಳೂರು ಗ್ರಾಮಾಂತರ	20	0
ಬೆಂಗಳೂರು ನಗರ	20	0
ಬೆಳಗಾವಿ	50	25
ಬಳ್ಳಾರಿ	9	0
ಬೀದರ್	0	0
ಬಿಜಾಪುರ	70	0
ಚಾಮರಾಜನಗರ	20	1641
ಚಿಕ್ಕಬಳ್ಳಾಪುರ	20	0
ಚಿಕ್ಕಮಗಳೂರು	13	1100
ಚಿತ್ರದುರ್ಗ	68	0
ದಕ್ಷಿಣ ಕನ್ನಡ	0	0

ದಾವಣಗೆರೆ	0	0
ಧಾರವಾಡ	0	0
ಗದಗ	20	14
ಗುಲ್ಬರ್ಗಾ	70	0
ಹಾಸನ	20	0
ಹಾವೇರಿ	20	0
ಕೊಡಗು	10	0
ಕೋಲಾರ	25	0
ಕೊಪ್ಪಳ	20	0
ಮಂಡ್ಯ	40	0
ಮೈಸೂರು	65	1232
ರಾಯಚೂರು	0	0
ರಾಮನಗರ	20	1074
ಶಿವಮೊಗ್ಗ	20	0
ತುಮಕೂರು	40	5714
ಉಡುಪಿ	0	0
ಉತ್ತರಕನ್ನಡ	0	0
ಯಾದಗಿರಿ	0	0
ಒಟ್ಟು	680	**11615**